

ಆನೆಕೆರೆ ಬಸದಿ ಹೊಕ್ಕ ಸಂದೇಶನಿಗೆ ಇಡೀ ಬಸದಿಯೆಲ್ಲಾ ಯಾವತ್ತಿಗಿಂತಲೂ ಚೆಂದ ವಾಗಿ, ಮಾದಕವಾಗಿ ಕಾಣಲು ಶುರುವಾಗಿತು. ಚಳಿಗಾಲದ ಸಂಜೆಯಲ್ಲೂ ತುಸು ಮಂಜಿನಿಂದ ತುಂಬಿಕೊಂಡು, ಆ ಮಂಜಿಗೆ, ದೋಸೆಗೆ ಚಟ್ನಿಯಂತೆ ಮೆತ್ತಿಕೊಂಡ ಹಾಗೆ ಎಳೆಬಿಸಿಲು ತಾಗಿ ಸುಮನೋಹರವಾಗಿ ಕಾಣುತ್ತಿದ್ದುದು ಈ ಚಳಿಗಾಲದಲ್ಲಿ ಅಪರೂಪ ಅಲ್ಲದಿದ್ದರೂ ಇವತ್ತ್ಯಾಕೋ ಇಡೀ ಆನೆಕೆರೆಯ ತಾವರೆಯೆಲ್ಲಾ ಯಾವತ್ತಿಗಿಂತಲೂ ಕೆಂಪಾಗಿ ಅರಳಿಕೊಳ್ಳುತ್ತಾ ಸುಂದರವಾಗಿ ಕಂಡಿತು ಸಂದೇಶನಿಗೆ.

ಸಂದೇಶ ಮೊದಲು ಇಲ್ಲಿಗೆ ಬರುವ ಹಕ್ಕಿಗಳ ಚಿತ್ರಗಳನ್ನು ತನ್ನ ಅಂತರಂಗದ ಕ್ಯಾಮರಾದೊಳಗೆ ಸೆರೆಯಾಗಿಸಿ ಆಮೇಲೆ ಬಗಲಿಗಿದ್ದ ಪುಟ್ಟ ಕ್ಯಾಮೆರಾದ ಲೆನ್ಸನ್ನು ಸರಿದೂಗಿಸಿ ಹಕ್ಕಿಗಳ ಚಿತ್ರ ಸೆರೆಹಿಡಿಯುತ್ತಿದ್ದ. ಕಳೆದೇಹೋದ ತನ್ನತನವನ್ನು ಈ ಆನೆಕೆರೆಯ ಸಮ್ಮುಖದಲ್ಲಿ ಹುಡುಕಾಡಿಕೊಳ್ಳಬೇಕು ಎಂದು ಮತ್ತೆ ಮತ್ತೆ ಆನೆಕೆರೆ ಬಸದಿಗೆ ಬರೋದು, ಫೋಟೊ ಹೊಡೆಯುತ್ತಾ ಅನೂಹ್ಯವಾದ ಏನನ್ನೋ ತನ್ನೊಳಗೆ ಕಂಡುಕೊಂಡು ಹೋಗೋದು ಇವನ್ನೆಲ್ಲಾ ಮಾಡುತ್ತಲೇ ಇದ್ದ ಸಂದೇಶ.

ಮೊದಲೇ ಇಲ್ಲಿ ಒಂದು ನರಪಿಳ್ಳೆಯೂ ಆ ಸಾಯಂಕಾಲ ಬಸದಿಗೆ ಕಾಲಿಡುದಿಲ್ಲ. ಬಸದಿಯ ತೀರ್ಥಂಕರರನ್ನು ಪೂಜೆ ಮಾಡೋ ಇಂದ್ರರಿಗೆ ಬಸದಿ ನೆನಪಾಗೋದು ಬೆಳಗ್ಗೆ 8 ಗಂಟೆಯ ಮೇಲಷ್ಟೇ, ಆಮೇಲೆ ಅವರು ಬರುವುದು ನಾಳೆ ಮತ್ತೆ 8 ಗಂಟೆಯ ಮೇಲೆ. ಅಲ್ಲಿಯವರೆಗೆ ಹಕ್ಕಿಗಳನ್ನು ಹೊರತುಪಡಿಸಿ ಬೇರ್‍ಯಾರೂ ಈ ಬಸದಿಗೆ ಬರುತ್ತಿರಲಿಲ್ಲವಾದ್ದರಿಂದ ಇದು ತಾನೇ ಕಟ್ಟಿದ ರಾಜಧಾನಿಯಂತೆ ಕಂಡು, ಲೋಕದ ಬಂಧನಗಳಿಂದ ಅರೆಕ್ಷಣವಾದರೂ ಮುಕ್ತನಾಗಲು ಇದೇ ಪ್ರಶಸ್ತ ಸ್ಥಳ ಅಂತೆನ್ನಿಸಿ ಸಂದೇಶನ ಕಣ್ಣು ಅದೆಷ್ಟು ಸಲ ಬೆರಗಾಗಿದೆ ಎನ್ನುವುದನ್ನು ಆ ಬಸದಿಯ ಗಂಟೆಯೇ ಹೇಳಬೇಕು. ಆದರೆ ಇವತ್ತು ಬಸದಿ ಹೊಕ್ಕುತ್ತಿದ್ದಂತೆಯೇ ಎಲ್ಲಿಂದಲೋ ತೇಲಿಕೊಂಡು ಬಂದ ಗಾಢವಾದ ಸುಗಂಧವನ್ನು ಅವನು ಇಷ್ಟು ದಿನ ಈ ಬಸದಿಯ ಹಿನ್ನೆಲೆಯಲ್ಲಿ ಆಸ್ವಾದಿಸಿದವನೇ ಅಲ್ಲ. ಒಂದು ದಿವ್ಯ ಸುಗಂಧ ಅವನ ಮೂಗನ್ನು ಪೂಸಿ ಹೋದಾಗ ಸಂದೇಶನ ನರನಾಡಿಗಳಲ್ಲಿ ಅದುವರೆಗೆ ಇರದೇ ಇದ್ದ ಹೊಸ ರೋಮಾಂಚನವೊಂದು ಸ್ಫುರಿಸತೊಡಗಿತು.

ಇಬ್ಬನಿ ಸುರಿದ ಹುಲ್ಲುಹಾಸಿನ ಮೇಲೆ ಹೆಜ್ಜೆ ಇಡುತ್ತಾ ಹೋಗುತ್ತಿದಂತೆಯೇ ಆ ಗಾಢ ಪರಿಮಳ ಅವನೊಳಗೇ ಮತ್ತೂ ಮತ್ತೂ ಸಮೃದ್ಧವಾಯ್ತು. ಆನೆಕೆರೆಯಲ್ಲಿ ಪ್ರತೀ ಸಂಜೆಯಲ್ಲೂ ಉಂಟಾಗುವ ಪರಿಮಳ, ವಾಸನೆ, ಶಬ್ದ, ಸ್ಪರ್ಶ, ಅಲುಗಾಟ ಇವೆಲ್ಲದ್ದರ ಪರಿಚಯ ಸಂದೇಶನಿಗೆ ತನಗಿಂತಲೂ ಜಾಸ್ತಿ ಇತ್ತು. ಯಾವುದೇ ಹೊಸ ವಾಸನೆಗಳು, ಶಬ್ದಗಳು, ಅಲುಗಾಟಗಳು ಉಂಟಾದರೂ ಆತನಿಗೆ ತಕ್ಷಣ ಗೊತ್ತಾಗುತ್ತಿತ್ತು. ಈಗ ತನ್ನೊಳಗೆ ಜಾರುತ್ತಿರುವ ಈ ದಿವ್ಯ ಸುಗಂಧ ಯಾವುದು? ಅಂತ ಪ್ರಶ್ನಿಸುತ್ತಲೇ ಹೋಗುತ್ತಿದ್ದ ಸಂದೇಶನಿಗೆ ಏನೊಂದೂ ಅಷ್ಟು ಸುಲಭವಾಗಿ ದಕ್ಕಲಿಲ್ಲ. ಚಿಕ್ಕಂದಿನಿಂದಲೂ ಸಂದೇಶನಿಗೆ ಪರಿಮಳಗಳ ಬಗ್ಗೆ ಅದೇನೋ ಅಪಾರ ಹುಮ್ಮಸ್ಸು. ವಾಸನೆ ಗಳೂ ಕೂಡ ನನ್ನೊಳಗೆ ಏನೋ ಒಂದನ್ನು ಉತ್ತೇಜಿಸುತ್ತವೆ, ಬಾಲ್ಯವನ್ನು, ಯೌವನದ ಕನಸುಗಳನ್ನು ಮರುಸೃಷ್ಟಿಸುತ್ತವೆ ಅಂತ ಗಾಢವಾಗಿ ನಂಬಿದ್ದ ಸಂದೇಶನಿಗೆ ವಾಸನೆಗಳನ್ನು ತನ್ನ ಕ್ಯಾಮೆರಾದೊಳಗೆ ಹೇಗೆ ಸೆರೆಹಿಡಿಯಲಿ ಅನ್ನುವ ಪ್ರಶ್ನೆಗಳು ಕಾಡಿದ್ದಿದೆ. ಕ್ಯಾಮೆರಾ ಸಾಯ್ಲಿ ಆಚೆ, ಈ ಪರಿಮಳದ ಬಗ್ಗೆ ಏನನ್ನಾದರೂ ಸ್ಟಡೀ ಮಾಡಬೇಕು ಅಂದುಕೊಳ್ಳುತ್ತಾ ಸಂದೇಶ ಮಾರ್ಕೆಟ್ಟಿನ ನೂರಾರು ಮೀನಿನ ಪರಿಮಳದಲ್ಲಿ, ಸೆಂಟಿನರಗಿಣಿಯರ ಸುಗಂಧಮಯ ಸಾಮ್ರಾಜ್ಯದಲ್ಲಿ, ದೇವಸ್ಥಾನದ ಧೂಪ ದೀಪ, ಹೋಮ, ಹೂವು, ವಿಭೂತಿ ಇವೆಲ್ಲಾ ಪರಿಮಳಗಳ ಸರಣಿ ಪಂದ್ಯದಲ್ಲಿ ಆಟವಾಡಿದ್ದಾನೆ. ಆದರೆ ಈಗ ತನ್ನನ್ನು ಕಾಡುತ್ತಿರುವ ಈ ಪರಿಮಳ ಯಾವುದು? ಅಂತ ಸಂದೇಶ ತೀರ್ಥಂಕರರ ಬಸದಿಯ ಪ್ರಾಂಗಣದಲ್ಲಿ ಸುತ್ತು ಹೊಡೆಯುತ್ತಲೇ ಕೇಳುತ್ತಾ ಹೋದ. ಅದು ಬೇರೆಯವರಿಗೆ ಅಂತಹ ಗಾಢವಾದ ಪರಿಮಳವಲ್ಲದಿದ್ದರೂ ಏನೋ ಒಂದು ಹೊಸ ತಾಜಾತನ ಸಂದೇಶನ ಮೂಗಿನ ಆಳಕ್ಕೆ ಹೊಕ್ಕಿಬಿಟ್ಟಿತ್ತು. ಅವನ ತಾರುಣ್ಯ ತುಂಬಿದ ಮೀಸೆಗಳಲ್ಲೂ, ನೆರೆತ ಗಡ್ಡದ ಸಂದಿನಲ್ಲಿಯೂ ಆ ಪರಿಮಳ ತಾಕುತ್ತಿತು, ಮತ್ತು ಅಷ್ಟೇ ಫಕ್ಕನೇ ಗಾಳಿಯಲ್ಲಿ ಕರಗಿಹೋಗಿ ಮತ್ತೆ ಹಿಂದಿನ ವರಾತ ಶುರು ಮಾಡುತ್ತಿತ್ತು.

ಸಂದೇಶ ಬಸದಿಯ ಮೆಟ್ಟಿಲಲ್ಲಿ ಕೂತು ತನ್ನ ನೆನಪಿನಕೋಶದಲ್ಲಿ ಜತನವಾಗಿ ಬೇರುಬಿಟ್ಟಿದ್ದ ಸಾವಿರಾರು ಪರಿಮಳಗಳ ಪಟ್ಟಿಯನ್ನು ಈಗ ಹಬ್ಬಿಕೊಂಡಿರುವ ಪರಿಮಳದ ಜೊತೆ ಹೋಲಿಕೆ ಮಾಡುತ್ತಾ ಹೋದ. ಈ ಪರಿಮಳ ಅಷ್ಟು ಸುಲಭಕ್ಕೆ ದಕ್ಕುವುದಿಲ್ಲ ಎಂಬುದು ಸಂದೇಶನಿಗೆ ಗೊತ್ತಾದರೂ ಇದು ತನ್ನ ಪಾಲಿಗೆ ಬರೀ ಪರಿಮಳ ವಲ್ಲ, ತನ್ನೊಳಗಿನ ಒಂದು ಭಾಗ ಅನ್ನಿಸಿದ್ದರಿಂದ ಆತ ಆ ಆಘ್ರಾಣಿಕೆಯಲ್ಲಿ ಪೂರ್ತಿಯಾಗಿ ಕಳೆದೇ ಹೋಗಿಬಿಟ್ಟ. ನಡೆಯುತ್ತಾ ಹೋದರೆ ಎಲ್ಲವೂ ನೆನಪಾಗುತ್ತದೆ ಅಂತಲೂ, ಪರಿಮಳ ದಕ್ಕುವ ಹೆಜ್ಜೆಗಳಲ್ಲಿ ಮತ್ತೂ ಲೀನವಾಗಿ ಹೋದ.

ಪರಿಮಳಗಳಿಗೂ ನಮ್ಮ ಮನಸ್ಸನ್ನು ನಿಯಂತ್ರಿಸುವ, ನಮ್ಮೊಳಗಿನ ಅಪರಿಚಿತ ಲೋಕವನ್ನು ಪರಿಚಿತ ಮಾಡುವ ಶಕ್ತಿ ಇದೆ ಎಂದು ಸೈಕಾಲಜಿಯಲ್ಲಿ ಸ್ಮೆಲ್‌ಗಳ ಬಗ್ಗೆ ವಿಶೇಷ ಅನುಭೂತಿಯನ್ನು ತನ್ನೊಳಗೆ ತಂದುಕೊಂಡೇ ಸಂದೇಶ ಓದಿದ್ದ. ಒಂದು ನೆನಪಿನೊಂದಿಗೆ ಪರಿಮಳವೂ ಇರುತ್ತದೆ, ಪರಿಮಳವೊಂದು ಮೂಡಿದಾಗ ಆ ಪರಿಮಳ, ಹಿಂದೆ ಅನುಭವಿಸಿದ್ದ ಕ್ಷಣವನ್ನು, ಸ್ಥಳವನ್ನು ಕಣ್ಣ ಮುಂದೆ ತರುತ್ತದೆ ಎನ್ನುವುದನ್ನು ಸಂದೇಶ ಗಾಢವಾಗಿ ನಂಬಿದ್ದ. ಯೋಚಿಸುತ್ತಾ ಹೋದವನ ಮನಸ್ಸು ಥಟ್ಟನೇ ಪಲ್ಲವಿ ಪಲ್ಲವಿ ಎಂದು ಗುನುಗತೊಡಗಿ ಉತ್ತೇಜಿತವಾಯ್ತು, ಮತ್ತೆ ಆ ಪರಿಮಳವನ್ನು ಯಾವುದೋ ತಾದ್ಯಾತ್ಮದಲ್ಲಿ ಧೇನಿಸತೊಡಗಿದ. ಅವನ ಮನಸ್ಸು, ಕಣ್ಣು ಖಚಿತವಾದಂತೆ ಕುಲುಕಿತು. ಪಲ್ಲವಿ! ಮತ್ತೆ ತನ್ನಷ್ಟಕ್ಕೆ ಹೇಳಿ ಅಲ್ಲಿಂದ ಎದ್ದು ಇಡೀ ಬಸದಿಗೆ ಪ್ರದಕ್ಷಿಣೆ ಹಾಕುತ್ತಾ ಹೋದ. ಪರಿಮಳಗಳು ತಿಳಿಯಾಗಿ ಅವನ ಮೂಗನ್ನು ಮತ್ತೆ ಮತ್ತೆ ಸಲುಹಿದವು. ಹೌದು, ಪಲ್ಲವಿಯದೇ ಪರಿಮಳ.

ಸಂದೇಶ ಕಾಮನಬಿಲ್ಲೊಂದರ ಬಣ್ಣವಾಗಿ ಹೋದ. ತನ್ನ